ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

*ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ*

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001

ಸಂಖ್ಯೆ: ವಾಇ : ಸುಮಪ : ಪ ಪ್ರ : 2014–15 : ಸೆಪ್ಟೆಂಬರ್ 2 , 2014

## ಪತ್ರಿಕಾ ಪ್ರಕಟಣೆ

## ಕಥಕ್‌ನ ರಾಣಿ ಮಾಯಾ ರಾವ್ ನಿಧನಕ್ಕೆ ಮುಖ್ಯಮಂತ್ರಿ ಶೋಕ

**ಬೆಂಗಳೂರು, ಸೆಪ್ಟೆಂಬರ್ 2 :**

ಕಥಕ್ ನೃತ್ಯ ಪ್ರಕಾರದ ರಾಣಿ ಶ್ರೀಮತಿ ಮಾಯಾ ರಾವ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ತಮ್ಮ ನೃತ್ಯದ ಹೆಜ್ಜೆಗಳಿಂದ ಕರ್ನಾಟಕದ ಹೆಸರನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದ ಶ್ರೀಮತಿ ಮಾಯಾರಾವ್ ಅವರು ಎಂಟು ದಶಕಗಳಷ್ಟು ಸುದೀರ್ಘ ಕಾಲ ನೃತ್ಯ ಲೋಕದಲ್ಲಿ ಮುನ್ನಡೆದು ಸಾಧನೆಯ ಉತ್ತುಂಕ್ಕೇರಿದ್ದರು ಎಂದು ಮುಖ್ಯಮಂತ್ರಿ ಬಣ್ಣಿಸಿದ್ದಾರೆ.

ನೃತ್ಯ ಸಂಯೋಜನೆಯಲ್ಲಿ ಮೊದಲಿಗರೆನಿಸಿದ್ದ ಶ್ರೀಮತಿ ಮಾಯಾ ರಾವ್ ಅವರು ಕಥಕ್ ಪ್ರಕಾರವನ್ನು ಎಲ್ಲೆಡೆ ಜನಪ್ರಿಯಗೊಳಿಸುವಲ್ಲಿಯೂ ಮಹತ್ತರ ಪಾತ್ರವಹಿಸಿದ್ದರು. ಇಂದು ಶ್ರೀಮತಿ ಮಾಯಾ ರಾವ್ ಅವರು ನಮ್ಮೊಂದಿಗೆ ಇಲ್ಲದಿದ್ದರೂ, ನೃತ್ಯ ಲೋಕದಲ್ಲಿ ಅವರು ಬಿಟ್ಟು ಹೋಗಿರುವ ಹೆಜ್ಜೆ ಗುರುತುಗಳು ನಮ್ಮ ಮನದಾಳದಲ್ಲಿ ಸದಾ ಕಾಲ ಹಚ್ಚ ಹಸಿರಾಗಿ ಉಳಿದಿರುತ್ತವೆ ಎಂದು ಶ್ರೀ ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ.

ಶ್ರೀಮತಿ ಮಾಯಾ ರಾವ್ ಅವರ ಆತ್ಮಕ್ಕೆ ಶಾಂತಿ ಲಭಿಸಲಿ, ಅವರ ಕುಟುಂಬದವರಿಗೆ, ಅವರ ಶಿಷ್ಯ ಕೋಟಿಗೆ ಹಾಗೂ ಅವರ ಅಪಾರ ಅಭಿಮಾನಿಗಳಿಗೆ ಅವರ ಅಗಲಿಕೆಯಿಂದ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಮುಖ್ಯಮಂತ್ರಿ ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

*************

ಡಿ ಪಿ ಎಂ